

# ಮೃಗತೃಷ್ಣೆ
THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ

## ಭಾವನೆಗಳ ಹಾವು ಏಣಿಯಾಟ

ಭಗವಾನ್ ಕುಟ್ಟಿ ತೃಪ್ತಿಯಿಂದ ಬಂದು ಕುಳಿತವನು 'ಇನ್ನೊಂದಿಪ್ಪತ್ತು ನಿಮಿಷದಲ್ಲಿ ಏರ್‌ಪೋರ್ಟ್‌ಗೆ ತಲುಪ್ತೀವಿ. ಸೆಕ್ಯೂರಿಟಿ ಚೆಕ್ ಇನ್ ಸೇರಿ ಎಲ್ಲಾ ಕಾಲುಗಂಟೆ ಒಳಗಡೆ ಮುಗಿದುಹೋಗುತ್ತದೆ. ಅದೆಷ್ಟು ಬಾರಿ ಅದೆಷ್ಟು ಜನರನ್ನು ನಾನು ಏರ್‌ಪೋರ್ಟ್‌ಗೆ ಬಿಟ್ಟಿರುವೆನೋ, ಏರ್‌ಪೋರ್ಟ್‌ನಿಂದ ಕರೆದುಕೊಂಡು ಬಂದಿರುವೆನೋ ಲೆಕ್ಕವಿಲ್ಲ. ಅದಿರಲಿ, ನಾನು ಅನೇಕ ವರ್ಷಗಳ ಕಾಲ ಮುಂಬಯಿಯ ಕಾಮಾಟಿಪುರದಲ್ಲಿ ಸಣ್ಣ ಹೋಟೆಲ್ ನಡೆಸುತ್ತಿದ್ದೆ ಎಂದು ನೀವು ಬಂದ ದಿನ ನಿಮಗೆ ಮಸಾಜ್ ಮಾಡುತ್ತಾ ಹೇಳಿದ್ದೆ, ನೆನಪಿರಬಹುದು. ಅಲ್ಲಿ ಸೆಕ್ಸ್ ಮತ್ತು ಹಣಕ್ಕೆ ಬೆಲೆ ಮಾತ್ರ ಇರುವುದು. ಸಂಬಂಧಗಳಿಗೆ ಒಂದಿಷ್ಟೂ ಬೆಲೆಯೂ ಇಲ್ಲ, ಅರ್ಥವೂ ಇಲ್ಲ. ಅದೇ ಸೂತ್ರಗಳನ್ನು ನಾವು ಇಡೀ ಜಗತ್ತಿನಲ್ಲಿ ಕಾಣುತ್ತೇವೆ. ಆದರೆ ನಾವು ಹಾಕಿಕೊಂಡ ಪರಿಮಿತಿಗಳಿಂದಾಗಿ ಅಂಥ ಸೂತ್ರಗಳು ಮಂಕಾಗಿ ಕಾಣುತ್ತವೆ. ಹಾಗಾಗಿ ನಾನು ಈ ವಿಷಯದಲ್ಲಿ ಸಿಂಧೂ ಮೆನನ್ನಳನ್ನ ಯಾವತ್ತೂ ಏನನ್ನೂ ಪ್ರಶ್ನಿಸಿಲ್ಲ. ನನಗೆ ತೃಪ್ತಿಪಡಿಸುವ ಸಾಮರ್ಥ್ಯ ಇಲ್ಲದ ಮೇಲೆ ಅವಳ ವರ್ತನೆಗಳನ್ನು ಪ್ರಶ್ನಿಸಲು ಮತ್ತು ಆಕ್ಷೇಪಿಸಲು ಯಾವ ನೈತಿಕ ಹಕ್ಕೂ ಇಲ್ಲ, ಸಾಮರ್ಥ್ಯವೂ ಇಲ್ಲ. ಹಾಗೆಂದು ಸಿಂಧೂ ಸಾರ್ವಜನಿಕವಾಗಿ ನನ್ನನ್ನು ಎಂದೂ ಅವಮಾನಪಡಿಸಿಲ್ಲ ಕೂಡ'. ಭಗವಾನ್ ಕುಟ್ಟಿಯ ಮಾತುಗಳು ನನ್ನನ್ನು ಬೇರೊಂದು ಪ್ರಪಂಚಕ್ಕೆ ಕೊಂಡೊಯ್ದಿದ್ದವು.

ಕಾರು ಏರ್‌ಪೋರ್ಟ್ ಪ್ರವೇಶಿಸಿತ್ತು. ಅಂಥ ರಶ್ ಇರಲಿಲ್ಲ. ಇಳಿದು ನನ್ನ ಬ್ಯಾಗುಗಳನ್ನು ಇಳಿಸಿಕೊಂಡಿದ್ದೆ. ಕಾರನ್ನು ಪಾರ್ಕ್ ಮಾಡಿ ಬಂದ ಭಗವಾನ್ ಕುಟ್ಟಿ ಎರಡು ಕಪ್ಪು ಚಹಾ ಹಿಡಿದು ಬಂದಿದ್ದ. ಚಹಾವನ್ನು ಹೀರಿ 'ಭಗವಾನ ಕುಟ್ಟಿ, ನಾನು ಮೊದಲು ನಿಮ್ಮನ್ನು ನೋಡಿದಾಗ ಒಬ್ಬ ಸಾಧಾರಣ ಮನುಷ್ಯನಂತೆ ಕಂಡಿದ್ದಿರಿ ನನಗೆ. ಆದರೆ ನೀವು ತುಂಬಾ ಅಸಾಧಾರಣ ವ್ಯಕ್ತಿತ್ವವನ್ನು ಹೊಂದಿರುವ ವ್ಯಕ್ತಿ. ಸತ್ಯಗಳನ್ನು ಅವುಗಳ ಮೂಲ ಸ್ವರೂಪದಲ್ಲಿ ಸಾಮಾನ್ಯವಾಗಿ ಮನುಷ್ಯ ಅಂಗೀಕರಿಸುವುದಿಲ್ಲ. ಆದರೆ ನೀವು ಸತ್ಯಗಳನ್ನು ಅಂಗೀಕಾರ ಮಾಡಿಕೊಳ್ಳುತ್ತಲೇ ಅವುಗಳಿಂದುಂಟಾಗುವ ಲಾಭ ನಷ್ಟಗಳಿಗೆ ಸಮನಾಗಿ ಸ್ಪಂದಿಸುತ್ತೀರಿ. ನಾನು ಕೇರಳಕ್ಕೆ ಬಂದಿದ್ದಕ್ಕೆ ವಿಶಿಷ್ಟವಾದ ವ್ಯಕ್ತಿಯೊಬ್ಬರ ಪರಿಚಯವಾದಂತಾಯಿತು. ಸಂದರ್ಭ ಒದಗಿ ಬಂದರೆ ಮತ್ತೊಮ್ಮೆ ಭೇಟಿಯಾಗೋಣ' ಎಂದು ಲಗೇಜಿನೊಂದಿಗೆ ಡಿಪಾರ್ಚರ್ ಗೇಟಿನ ಕಡೆ ಮುಖ ಮಾಡಿದ್ದೆ. 'ನೀವು ಕೇರಳಕ್ಕೆ ಬಾರದೆ ಇದ್ದಲ್ಲಿ, ನನ್ನನ್ನು ಅಂದು ಕೆ.ಎಮ್. ನಯ್ಯಾರ್ ಮನೆಗೆ ಕರೆತರದೆ ಇದ್ದಲ್ಲಿ ನಾನಿಂದು ಭೂಮಿಯ ಮೇಲೆ ಬದುಕುಳಿಯುತ್ತಿರಲಿಲ್ಲ. ನನ್ನನ್ನು ನಿಮ್ಮೊಂದಿಗೆ ಕಳುಹಿಸಿದ ಅರುಂಧತಿ ಕೂಡಾ ನಾನಿಂದು ಬದುಕಿರಲು ಕಾರಣಕರ್ತಳು. ಈ ಜನ್ಮದಲ್ಲಿ ನಾನು ನಿಮ್ಮ ಋಣ ತೀರಿಸಲಿಕ್ಕೆ ಸಾಧ್ಯವಿಲ್ಲ. ನೀವು ದಿಲ್ಲಿಯಲ್ಲಿ ಎಷ್ಟು ದಿನ ಇರುತ್ತೀರೋ ತಿಳಿಯದು. ಸಾಧ್ಯವಾದರೆ ಸಿಂಧೂ ಮೆನನ್ನಳನ್ನ ಭೇಟಿ ಮಾಡಿ. ಅವಳಿಗೂ ಫೋನ್ ಮಾಡಿ ತಿಳಿಸಿರ್ತೀನಿ. ಶಿ ಈಸ್ ಎ ಗ್ರೇಟ್ ವುಮೆನ್' ಎಂದು ಸಿಂಧೂ ಮೆನನ್ನಳ ವಿಸಿಟಿಂಗ್ ಕಾರ್ಡನ್ನು ಕೊಟ್ಟಿದ್ದ. ನಾನು ಡಿಪಾರ್ಚರ್ ಗೇಟನ್ನು ಪ್ರವೇಶಿಸಿದ್ದೆ. ಮನಸ್ಸು ಭಾರವಾಗಿತ್ತು.

ಭಾಗ 15

ಫ್ಲೈಟ್ ಒಂದು ಗಂಟೆ ತಡವಾಗಿ ದೆಹಲಿಯ ಇಂದಿರಾಗಾಂಧಿ ಇಂಟರ್‌ನ್ಯಾಷನಲ್ ಟರ್ಮಿನಲ್‌ನಲ್ಲಿ ಲ್ಯಾಂಡ್ ಆದಾಗ ಬೆಳಿಗ್ಗೆ ಎಂಟೂಕಾಲು ಗಂಟೆಯಾಗಿತ್ತು. ವಿಮಾನ ಭೂಸ್ಪರ್ಶವಾಗುತ್ತಿದ್ದಂತೆ ಫೋನ್ ಮೊಳಗಿತ್ತು. ಟ್ರೂಕಾಲರ್‌ನಲ್ಲಿ **Sindhu Menon the classical dancer** ಎಂದು ತೋರಿಸುತ್ತಿತ್ತು. ಕ್ಷಣ ರೋಮಾಂಚನಗೊಂಡಿದ್ದೆ. 'ಹಲೋ' ಎಂದಿದ್ದೆ. 'ಕ್ರಾಂತಿ ಕಿರಣ್ ರೆಡ್ಡಿಯವರಾ... ದಿಲ್ಲಿಗೆ ಬರ್ತಿದ್ದೀರಿ ಅಂತ ಭಗವಾನ್ ಕುಟ್ಟಿ ಫೋನ್ ಮಾಡಿ ತಿಳಿಸಿದ್ರು' ಎಂದಳು. 'ಹೌದು, ಜಸ್ಟ್ ದಿಲ್ಲಿಯಲ್ಲಿ ಫ್ಲೈಟ್ ಲ್ಯಾಂಡ್ ಆಯ್ತು. ನಿಮ್ಮ ಡ್ಯಾನ್ಸ್ ಪರ್ಫಾರ್ಮೆನ್ಸ್ ಮರೆಯೋದಕ್ಕೆ ಆಗ್ತಾ ಇಲ್ಲ. ನೀವು ಪ್ರವಾಹ ಪೀಡಿತರಿಗೆ ಒಂದು ಕೋಟಿ ಡೊನೇಟ್ ಮಾಡಿರುವ ಸುದ್ದಿ ಟಟೀವಿಯಲ್ಲಿ ನೋಡಿ ಹೃದಯ ತುಂಬಿ ಬಂತು'. ಮುಂದೆ ಏನು ಮಾತನಾಡಬೇಕೆಂದು ತೋಚದೆ ಸುಮ್ಮನಾಗಿದ್ದೆ.

ಸಿಂಧೂ ಮೆನನ್, 'ಥ್ಯಾಂಕ್ಸ್. ಇರೋರು ಇಂಥ ಟೈಮಿನಲ್ಲಿ ತಮ್ಮ ಔದಾರ್ಯವನ್ನು ತೋರಬೇಕು. ಸದ್ಯ ನಾನು ದೆಹಲಿಯಲ್ಲಿ ಇಲ್ಲ. ಡಾಕ್ಟರ್ ಆಮ್ರಪಾಲಿ ಜೊತೆ ಮಸ್ಸೂರಿಗೆ ಬಂದಿದ್ದೇನೆ. ಆಮ್ರಪಾಲಿ ಯಾವುದೋ ಪೇಶೆಂಟ್‌ಗೆ ಟ್ರೀಟ್ಮೆಂಟ್ ಕೊಡ್ತಿದಾರೆ. ಜೊತೆಗೆ ನಾನು ಡ್ಯಾನ್ಸ್ ಥೆರಪಿ ರೆಸ್ಪಾನ್ಸಿಬಿಲಿಟಿ ವಹಿಸಿಕೊಂಡಿದ್ದೀನಿ. ಇಂಡಿಯಾದ